# ಪ್ರಾರ್ಥನೆ

## ಶ್ರೀರಾಮಾಷ್ಟಕಮ್

**ಭಜೇ ವಿಶೇಷಸುಂದರಂ ಸಮಸ್ತಪಾಪಖಂಡನಮ್ ।**
**ಸ್ವಭಕ್ತಚಿತ್ತರಂಜನಂ ಸದೈವ ರಾಮಮದ್ವಯಮ್ ॥ ೧ ॥**

ಅತ್ಯಂತ ಸುಂದರನಾದ, ಎಲ್ಲ ಪಾಪಗಳನ್ನು ನಾಶಗೊಳಿಸುವ, ತನ್ನ ಭಕ್ತರ ಮನಸ್ಸಿಗೆ ಆನಂದ ನೀಡುವ ಏಕಮೇವ ಅದ್ವಿತೀಯನಾದ ಶ್ರೀರಾಮನನ್ನು ಸದಾ ಭಜಿಸುತ್ತೇನೆ.

**ಜಟಾಕಲಾಪಶೋಭಿತಂ ಸಮಸ್ತಪಾಪನಾಶಕಮ್ ।**
**ಸ್ವಭಕ್ತಭೀತಿಭಂಜನಂ ಭಜೇ ಹ ರಾಮಮದ್ವಯಮ್ ॥ ೨ ॥**

ಜಟಾಜೂಟಗಳಿಂದ ಶೋಭಿಸುತ್ತಿರುವ, ಎಲ್ಲ ಪಾಪಗಳನ್ನು ನಾಶಮಾಡುವ, ತನ್ನ ಭಕ್ತರ ಭಯವನ್ನು ನಿವಾರಿಸುವ, ಅದ್ವಿತೀಯನಾದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

**ನಿಜಸ್ವರೂಪಬೋಧಕಂ ಕೃಪಾಕರಂ ಭವಾಪಹಮ್ ।**
**ಸಮಂ ಶಿವಂ ನಿರಂಜನಂ ಭಜೇ ಹ ರಾಮಮದ್ವಯಮ್ ॥ ೩ ॥**

ತನ್ನ ನೈಜಸ್ವರೂಪವನ್ನು ಕುರಿತ ಜ್ಞಾನವನ್ನು ನೀಡುವ, ಕೃಪೆಯನ್ನು ವಿಪುಲವಾಗಿ ಹರಿಸುವ, ಸಂಸಾರದ ಬಂಧನವನ್ನು ನಿವಾರಿಸುವ, ಸರ್ವತ್ರ ಸಮರೂಪನೂ ಮಂಗಳಕರನೂ ಕಳಂಕರಹಿತನೂ ಆದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

**ಸಪ್ರಪಂಚಕಲ್ಪಿತಂ ಹ್ಯನಾಮರೂಪವಾಸ್ತವಮ್ ।**
**ನಿರಾಕೃತಿಂ ನಿರಾಮಯಂ ಭಜೇ ಹ ರಾಮಮದ್ವಯಮ್ ॥ ೪ ॥**

ಮಾಯೆಯ ಮೂಲಕ ಸಮಸ್ತ ಪ್ರಪಂಚವನ್ನು ಕಲ್ಪಿಸಿಕೊಂಡಿರುವ, ಆದರೆ ವಾಸ್ತವವಾಗಿ ನಾಮರೂಪಗಳಿಲ್ಲದ, ದೇಹವಿಲ್ಲದ, ರೋಗರುಜಿನಗಳಿಲ್ಲದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

**ನಿಷ್ಪ್ರಪಂಚನಿರ್ವಿಕಲ್ಪನಿರ್ಮಲಂ ನಿರಾಮಯಮ್ ।**
**ಚಿದೇಕರೂಪಸಂತತಂ ಭಜೇ ಹ ರಾಮಮದ್ವಯಮ್ ॥ ೫ ॥**

ಪ್ರಪಂಚವಿಲ್ಲದ, ವಿಕಾರಶೂನ್ಯನಾದ, ನಿರ್ಮಲನೂ ವ್ಯಾಧಿರಹಿತನೂ ಆದ, ಚಿನ್ಮಯರೂಪದಿಂದ ಸದಾ ಬೆಳಗುವ ಅದ್ವಿತೀಯನಾದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

**ಭವಾಬ್ಧಿಪೋತರೂಪಕಂ ಹ್ಯಶೇಷದೇಹಕಲ್ಪಿತಮ್ ।**
**ಗುಣಾಕರಂ ಕೃಪಾಕರಂ ಭಜೇ ಹ ರಾಮಮದ್ವಯಮ್ ॥ ೬ ॥**

ಭವಸಾಗರದಿಂದ ದಾಟಿಸುವ ನೌಕೆಯಂತಿರುವ, ಎಲ್ಲ ದೇಹಗಳಲ್ಲಿ ನೆಲೆಸಿರುವ, ಎಲ್ಲ ಗುಣಗಳ ಹಾಗೂ ಕೃಪೆಯ ಆಗರವಾದ ಅದ್ವಿತೀಯನಾದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

**ಮಹಾಸುವಾಕ್ಯಬೋಧಕೈರ್ವಿರಾಜಮಾನವಾಕ್ಪದೈಃ ।**
**ಪರಬ್ರಹ್ಮವ್ಯಾಪಕಂ ಭಜೇ ಹ ರಾಮಮದ್ವಯಮ್ ॥ ೭ ॥**

ಮಹಾವಾಕ್ಯಗಳನ್ನು ಬೋಧಿಸುವ ಉಪನಿಷತ್ತಿನ ವಾಕ್ಯಗಳಲ್ಲಿ ನೆಲೆಸಿರುವ, ಸರ್ವವ್ಯಾಪಕ ಪರಬ್ರಹ್ಮನೇ ಆಗಿರುವ ಅದ್ವಿತೀಯನಾದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

**ಶಿವಪ್ರದಂ ಸುಖಪ್ರದಂ ಭವಚ್ಛಿದಂ ಭ್ರಮಾಪಹಮ್ ।**
**ವಿರಾಜಮಾನದೇಶಿಕಂ ಭಜೇ ಹ ರಾಮಮದ್ವಯಮ್ ॥ ೮ ॥**

ಮಂಗಳಕರನೂ, ಸುಖವನ್ನು ನೀಡುವವನೂ, ಭವಬಂಧನವನ್ನು ಕತ್ತರಿಸುವವನೂ, ಭ್ರಮೆಯನ್ನು ನಾಶಗೊಳಿಸುವವನೂ, ಗುರುವಿನ ರೂಪದಲ್ಲಿ ವಿರಾಜಮಾನನಾಗಿರುವವನೂ ಆದ ಅದ್ವಿತೀಯ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

— ವೇದವ್ಯಾಸ

## ಸೂಕ್ತಿಪ್ರಭ

## ಕವಿ ಸೂಕ್ತಿಗಳು

ಕಣ್ಣಿನಲ್ಲಿ ಪಾಪೆಯಿರುವಂತೆ ಭಗವಂತನು ಎಲ್ಲ ಜೀವಿಗಳ ಅಂತರಂಗದಲ್ಲಿದ್ದಾನೆ. ಇದನ್ನು ಅರಿಯದ ಮೂರ್ಖರು ಅವನನ್ನು ಹೊರಗೆಲ್ಲ ಅರಸುತ್ತಾರೆ.

— ಕಬೀರ





ಶಂಖವನ್ನು ಸುಟ್ಟು ಹಾಕಿದರೂ ಅದು ಬಿಳಿಯಾಗಿಯೇ ಉಳಿಯುವುದು; ಹಾಲನ್ನು ಕುದಿಸಿದರೂ ಅದು ರುಚಿಯಾಗಿರುವುದು; ಒಳ್ಳೆಯ ಜನರು ಎಷ್ಟೇ ಕಷ್ಟಪಟ್ಟರೂ ಸಜ್ಜನರಾಗಿಯೇ ಉಳಿಯುವರು.

—ಅವ್ವೈಯಾರ್

ಮರಳಿನ ಕಣದಲ್ಲಿ ಜಗತ್ತನ್ನು ಕಾಣಲು, ಕಾಡು ಹೂವಿನಲ್ಲಿ ಸ್ವರ್ಗವನ್ನು ಕಾಣಲು ನಿನ್ನ ಅಂಗೈಯನ್ನು ಅನಂತವಾಗಿಸು; ವೇಳೆಯನ್ನು ಶಾಶ್ವತವಾಗಿಸು.

—ವಿಲಿಯಂ ಬ್ಲೇಕ್





ತಾನು ನೆಟ್ಟ ಮರದ ನೆರಳಲ್ಲಿ ತಾನೆಂದೂ ಕುಳಿತುಕೊಳ್ಳುವುದಿಲ್ಲ ಎಂದರು ತಿಳಿದೂ ಮರವನ್ನು ನೆಡುವವನು ಕಡೆಯ ಪಕ್ಷ ಬಾಳಿನ ಅರ್ಥವನ್ನು ಅರಿಯಲಾರಂಭಿಸಿದ್ದಾನೆ.

—ರವೀಂದ್ರನಾಥ ಠಾಕೂರ್